# ಕುಟ್ಟನ ಮನೆ ಗೆಳೆಯರು

■ ಕಾಸಿಂ ನದಾಫ್ ಭೈರಾಪುರ
ಕಲೆ: ಸಂತೋಷ್ ಸಸಿಹಿತ್ಲು



ಕುಟ್ಟನ ಮನೆಯಲಿ ಎರಡು ಇಲಿ
ಬಿಲವ ಕೊರೆದು ಇವೆ
ಕುಟ್ಟನಿಗದು ಗೊತ್ತು ಅಮ್ಮನಿಗಲ್ಲ
ಮನೆಯ ಸ್ನೇಹಿತರೇ ಅವನಿಗವೆ

ತಾನು ತಿನ್ನುವುದರಲ್ಲೇ ತುಸು
ಉಳಿಸಿಕೊಳ್ಳುವನು
ಬಿಲದ ಬಾಯಿಗೆ ಹೋಗಿ ನೋಡಿ
ಇಟ್ಟು ಬಿಡುವನು

ಅಮ್ಮ ಇಂದು ಅಡುಗೆ ಮನೆಯಲಿ
ಸಂಡಿಗೆ ಕರಿಯುತ್ತಿದ್ದಳು
ಕುಟ್ಟನು ಬಂದು ಸಂಡಿಗೆ ಕೇಳಲು
ಬಟ್ಟಲ ತುಂಬಾ ಕೊಟ್ಟಳು

ಒಂದೆರಡು ಸಂಡಿಗೆ ಸಣ್ಣಗೆ ಮುರಿಯುತಾ
ಮಲಗುವ ಕೋಣೆಗೆ ಬಂದನು
ಮಂಚದ ಕೆಳಗೆ ತೂರಿಕೊಂಡು
ಬಿಲದ ಬಾಯಿಗಿಟ್ಟನು

ಕುಟ್ಟನು ಈಗ ಮಂಚವ ಏರಿ
ಬಗ್ಗಿ ನೋಡುತಲಿರುವನು ಹಾಗೆ
ಇಲಿಗಳೆರಡು ಬಂದು ಹೊರಗೆ
ಸಂಡಿಗೆ ಎಳೆದೊಯ್ದವು ಬಿಲದೊಳಗೆ

ತಿನ್ನಿ ಫ್ರೆಂಡ್ಸ್ ತಿನ್ನಿ ನೀವು
ನಾನು ಈಗ ತಿನ್ನುವೆನು
ಎನ್ನುತಾ ಹಿಗ್ಗಿ ಕುಟ್ಟನು ಸಂಡಿಗೆ
ತಾನು ಮುರಿಮುರಿದು ತಿಂದನು

ಭಾನುವಾರವೆಂಬುದು ಕುಟ್ಟನಿಗೆ
ತಟ್ಟನೆ ನನಪಾಗಿ
ಅಲ್ಲೇ ನಿದ್ದೆಗೆ ಜಾರಿಬಿಟ್ಟನು
ಮುಗುಳುನಗೆ ಮುಖವಾಗಿ










**ಪೂಜಿತಾ ಎಂ.**
8ನೇ ತರಗತಿ,
ನಾರಾಯಣ ಟೆಕ್ನೊ
ಸ್ಕೂಲ್, ಬೆಂಗಳೂರು





**ವಂಶಿಕಾ ವಿವೇಕ್ ಎ.**
3ನೇ ತರಗತಿ, ಯೂರೊ
ಸ್ಕೂಲ್, ಹಾಸನ